**CC NO.568/2018**
**CW-2/PW-2**

**ದಿನಾಂಕಃ 05-05-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ವಾಟೀ ಸವಾಲು** ಃ- **ಶ್ರೀ. ಆರ್.ಎಸ್.** ವಕೀಲರಿಂದ **ಆರೋಪಿ** ಪರವಾಗಿ ಃ-

ಅದರಂಗಿ ಅರಣ್ಯ ಪ್ರದೇಶ ಆದ ನಂತರ ಕೃಷಿ ಜಮೀನು ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಕೃಷಿ ಜಮೀನುಗಳಲ್ಲಿ ಅಲ್ಲಲ್ಲೇ ತೋಟದ ಮನೆಗಳು ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅರಣ್ಯ ಪ್ರದೇಶ ಮತ್ತು ಕೃಷಿ ಜಮೀನಿನ ನಡುವೆ ರಸ್ತೆ ಇದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅರಣ್ಯ ಪ್ರದೇಶದಲ್ಲಿ ಮುಳ್ಳು ಹಾಗೂ ಪೊದೆಗಳು ಇರುವುದರಿಂದ ರಾತ್ರಿ ಸಮಯದಲ್ಲಿ ಆನೆ ಕಾರ್ಯಾಚರಣೆ ಕಷ್ಟ ಎಂದರೆ ಸಾಕ್ಷಿಯು ಕಷ್ಟ ಇದ್ದರು, ನಾವು ಮಾಡಬೇಕಾಗುತ್ತದೆಂದು ನುಡಿಯುತ್ತಾರೆ. ಅರಣ್ಯ ಪ್ರದೇಶದಲ್ಲಿ ಸಾಕಷ್ಟು ಕತ್ತಲು ಇರುವುದರಿಂದ ಆನೆಗಳು ಬಂದಿರುವುದು ಗೊತ್ತಾಗುವುದಿಲ್ಲ ಎಂದರೆ ಸಾಕ್ಷಿ ಚಂದ್ರನ ಬೆಳಕಿನಿಂದ ಹಾಗೂ ಟಾರ್ಚ್ ಬೆಳಕಿನಿಂದ ಮತ್ತು ಆನೆಗಳು ಹೋದ ಗುರುತಿನಿಂದ ಗುರುತಿಸುತ್ತೇವೆಂದು ನುಡಿಯುತ್ತಾರೆ.

2. ಸಾಮಾನ್ಯವಾಗಿ ಯಾವುದೇ ಕಾಡು ಪ್ರಾಣಿಗಳು ಬೇಟೆ ಆಡುವ ಸಮಯದಲ್ಲಿ ನಿಮ್ಮ ಹಾಗೂ ಸಾರ್ವಜನಿಕರನ್ನು ನೋಡಿದರೆ ಬಿಟ್ಟು ಓಡಿ ಹೋಗುವ ಸಾದ್ಯತೆ ಇರುತ್ತದೆಂದರೆ ಸಾಕ್ಷಿಯು ನಾವು ಅದಕ್ಕೆ ತೊಂದರೆ ಆಗದಂತೆ ಜಾಗೃತರಾಗಿ ಇರುತ್ತೇವೆಂದು ನುಡಿಯುತ್ತಾರೆ. ನೀವು ನವಿಲನ್ನು ನೋಡಿದಾಗ ಕತ್ತಿನ ಭಾಗದಲ್ಲಿ ರಕ್ತ ಬರುತ್ತಿತ್ತು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನವಿಲನ್ನು ಕಾರಿನಲ್ಲಿ ಇಟ್ಟಿದ್ದ ಜಾಗದಲ್ಲಿ ರಕ್ತದ ಕಲೆ ಇತ್ತ ಎಂದರೆ ಸಾಕ್ಷಿಯು ಹೌದು ಸ್ವಲ್ಪ ಇತ್ತು ಎಂದು ನುಡಿಯುತ್ತಾರೆ. ಮಹಜರಿನಲ್ಲಿ ಕಾರಿನಲ್ಲಿ ರಕ್ತದ ಕಲೆ ಇದ್ದ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಓಡಿ ಹೋದ ವ್ಯಕ್ತಿಯ ಚಹರೆಯನ್ನು ಮಹಜರಿನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಓಡಿ ಹೋಗಿರುತ್ತಾರೆಂದು ಮಾತ್ರ ನಮೂದಿಸಿರುತ್ತೇವೆಂದು ನುಡಿಯುತ್ತಾರೆ.

3. ಸದರಿ ದಿನದಂದು ನೀವು ಎಷ್ಟು ಜನ ಸಿಬ್ಬಂದಿಗಳು ಇದ್ದಿದ್ದೀರಿ ಎಂದರೆ ಸಾಕ್ಷಿಯು ಒಟ್ಟು 5 ಜನ ಸಿಬ್ಬಂದಿಗಳು ಇದ್ದು, ಸದರಿಯವರೆಂದರೆ ಆರ್.ಎಫ.ಓ ವನಿತಾ ಮೇಡಂ, ನಾನು, ಹರೀಶ, ಶಿವಣ್ಣ ಮತ್ತು ಚಾಲಕ ಅಲಿಜಾನ್ ಎಂದು ನುಡಿಯುತ್ತಾರೆ. ಸದರಿ ಓಡಿ ಹೋದ ವ್ಯಕ್ತಿಯನ್ನು ನೀವು ಮತ್ತು ನಿಮ್ಮ ಇತರ ಸಿಬ್ಬಂದಿಗಳು ಹಿಡಿಯಲು ಪ್ರಯತ್ನಿಸಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ರಾತ್ರಿಯಲ್ಲಿ ನಾವು ಆನೆ ಓಡಿಸುವ ಕಾರ್ಯದಲ್ಲಿ ಇದ್ದಿದರಿಂದ ನಮಗೆ ಸುಸ್ತು ಆಗಿದ್ದರಿಂದ ಆತನು ಓಡಿ ಹೋದಾಗ ನಮಗೆ ಹಿಡಿಯಲು ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಓಡಿ ಹೋದ ಆರೋಪಿಯನ್ನು ಹಿಡಿಯಲು ಪ್ರಯತ್ನ ಪಟ್ಟಿದ್ದೇವು ಎಂದು ಮಹಜರಿನಲ್ಲಿ ಮತ್ತು ನಿಮ್ಮ ಹೇಳಿಕಯಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

4. ಸಾಮಾನ್ಯವಾಗಿ ನವಿಲಿನ ಹತ್ತಿರ ಯಾವುದೇ ಪ್ರಾಣಿ ಮತ್ತು ಮನುಷ್ಯರು ಹೋದರೆ ಹಾರಿ ಹೋಗುತ್ತವೆಂದರೆ ಸಾಕ್ಷಿಯು ಕೆಲವೊಂದು ಸಮಯದಲ್ಲಿ ಹಾರಿ ಹೋಗುತ್ತವೆಂದು ನುಡಿಯುತ್ತಾರೆ. ನವೀಲನ್ನು ಬರಿ ಕೈಯಿಂದ ಹಿಡಿಯಲು ಆಗುವುದಿಲ್ಲ, ಬಲೆ ಮತ್ತು ತಂತಿಯ ಸಹಾಯದಿಂದ ಮಾತ್ರ ಹಿಡಿಯಲು ಬರುತ್ತದೆಂದರೆ ಸಾಕ್ಷಿಯು ನವೀಲುಗಳು ಬಹಳ ಸಮಯ ಮೇವನ್ನು ತಿನ್ನುತ್ತಿದ್ದರೆ ಕೈಯಿಂದ ಹಿಡಿಯಬಹುದು ಎಂದು ನುಡಿಯುತ್ತಾರೆ. ಆರೋಪಿಯ ಕಾರಿನಲ್ಲಿ ತಂತಿ ಬಲೆ ಮತ್ತು ದಾರ ಕಂಡು ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಆರೋಪಿಗಳು ಯಾವ ರೀತಿ ನವೀಲನ್ನು ಹಿಡಿದುಕೊಂಡಿರುತ್ತಾರೆಂದು ಕೇಳಿದ ಬಗ್ಗೆ ಮಹಜರಿನಲ್ಲಿ ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನೀವು ಮೊದಲು ವಾಹನವನ್ನು ನಿಲ್ಲಿಸಿ, 1ನೇ ಆರೋಪಿಯನ್ನು ವಿಚಾರಿಸಿ ನಂತರ ವಾಹನ ತಪಾಸಣೆ ಮಾಡಿ ಮಹಜರ್ ಬರೆದಿರುತ್ತೀರಿ ಎಂದರೆ ಸಾಕ್ಷಿಯು ವಾಹನವನ್ನು ಕಂಡ ತಕ್ಷಣ ನಾವು ನಿಲ್ಲಿಸಿದಾಗ ನಮಗೆ ಕಾರಿನಲ್ಲಿ ನವೀಲು ಕಂಡು ಬಂದ ನಂತರ ಆರೋಪಿಯ ವಿವರವನ್ನು ಕೇಳಿ ಮಹಜರ್ ಬರೆಯಲು ಪ್ರಾರಂಭಿಸಿರುತ್ತೇವೆಂದು ನುಡಿಯುತ್ತಾರೆ. ನೀವು ವಾಹನವನ್ನು ತಡೆದು ನಿಲ್ಲಿಸಿ

ಆರೋಪಿಯ ವಿಚಾರಣೆ ಮಾಡಲು ಎಷ್ಟು ಸಮಯ ಆಯಿತು ಎಂದರೆ ಸಾಕ್ಷಿಯು 1 ನಿಮಿಷವು ಆಗಿರುವುದಿಲ್ಲ, ಕಾರಣ ಒಬ್ಬ ಆರೋಪಿಯು ಓಡಿ ಹೋಗಿರುತ್ತಾರೆಂದು ನುಡಿಯುತ್ತಾರೆ.

5. ನಿಮ್ಮ ಮುಖ್ಯ ವಿಚಾರಣೆಯಲ್ಲಿ ನೀವು ಮತ್ತು ನಿಮ್ಮ ಸಿಬ್ಬಂದಿಗಳು ಸದರಿ ವಾಹನದ ಹಿಂದಿನ ಡಿಕ್ಕಿಯನ್ನು ತೆಗೆದು ನೋಡಲಾಗಿ ಅಲ್ಲಿ ಒಂದು ನವೀಲನ್ನು ಸಾಯಿಸಿ ಇಟ್ಟಿದ್ದರು ಎಂದು ಆ ವಿಚಾರವನ್ನು ಮಹಜರಿನಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ನವೀಲಿನ ಮೃತ ದೇಹ ಇರುತ್ತದೆಂದು ಹೇಳಿದ್ದು, ಆದರೆ ಡಿಕ್ಕಿಯನ್ನು ತೆಗೆದು ನೋಡಲಾಗಿ ಎಂಬ ವಿಚಾರವನ್ನು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಆತನು ನಮ್ಮ ಹಳ್ಳಿಯ ಬಳಿ ನವೀಲನ್ನು ಹಿಡಿದು ಎಂದು ಹೇಳಿರುವ ವಿಚಾರವನ್ನು ಮಹಜರಿನಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸ್ಥಳದಲ್ಲಿ ಆರೋಪಿಯ ಹೇಳಿಕೆಯ ಬರವಣಿಗೆಯನ್ನು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸ್ಥಳದಲ್ಲಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಅದರಂಗಿ ಅರಣ್ಯ ಪ್ರದೇಶದ ನಂತರ ಅದರಂಗಿ ಗ್ರಾಮ, ಕೆಬ್ಬೆಪಾಳ್ಯ, ಅಜ್ಜಹಳ್ಳಿ ಗ್ರಾಮಗಳು ಬರುತ್ತವೆಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಗ್ರಾಮದಲ್ಲಿ ವಾಸ ಮಾಡುವವರ ಜಮೀನು ನಿಮ್ಮ ಇಲಾಖೆಯ ಅರಣ್ಯ ಪ್ರದೇಶ ಆದ ನಂತರ ಸಿಗುತ್ತವೆಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

6. 2014 ರಲ್ಲಿ ನಿಮ್ಮ ಮತ್ತು ನಿಮ್ಮ ಇತರ ಸಿಬ್ಬಂದಿಗಳ ಹತ್ತಿರ ಮೊಬೈಲ್ ಪೋನ್ ಇದ್ದವು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಸ್ಥಳದಲ್ಲಿ ನೀವು ಮತ್ತು ನಿಮ್ಮ ಇತರ ಸಿಬ್ಬಂದಿಗಳು ನವೀಲಿನ ಪೋಟೋವನ್ನು ತೆಗೆದಿರಲಿಲ್ಲ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನವೀಲನ್ನು ಚಿರತೆಗಳು ಬೇಟೆ ಆಡಿದಾಗ ಚಿರತೆಯ ಉಗುರಿನ ಗುರುತು ನವೀಲಿನ ಮೇಲೆ ಇರುತ್ತದೆಂದರೆ ಸಾಕ್ಷಿಯು ಹಲ್ಲಿನ ಗುರುತು ಇರುತ್ತದೆಂದು ನುಡಿಯುತ್ತಾರೆ. ಚಿರತೆಯು ಹಲ್ಲು ಮತ್ತು ಉಗುರಿನಲ್ಲಿ ಬೇಟೆ ಆಡುತ್ತವೆಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. 1ನೇ ಆರೋಪಿಯು ಕೆಬ್ಬೆಪಾಳ್ಯದ ವಾಸಿ ಎಂದು ನಿಮಗೆ ಗೊತ್ತಿತ್ತು ಎಂದರೆ ಸಾಕ್ಷಿಯು ಇಲ್ಲ,

ಸದರಿಯವರು ಬೆಂಗಳೂರಿನ ಜಯನಗರದ ವಾಸಿ ಎಂದು ಎಂದು ನುಡಿಯುತ್ತಾರೆ. 2ನೇ ಆರೋಪಿಯು ಕೆಬ್ಬೆಪಾಳ್ಯದ ವಾಸಿ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

7. 2015 ರಿಂದ 2017 ರವರೆಗೆ ನೀವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಮ್ಮ ಮೇಲಾಧಿಕಾರಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ದಿನಾಂಕಃ 18-11-2017 ರಂದು ಹೇಳಿಕೆ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ, ಸಾಕ್ಷಿಯು ಮುಂದುವರೆದು ಸೆಪ್ಟೆಂಬರ್-2015 ರಿಂದ ಜನವರಿ-2017 ರವರೆಗೆ ನಾನು ತರಬೇತಿಯಲ್ಲಿ ಇದ್ದೇನು ಎಂದು ನುಡಿಯುತ್ತಾರೆ. ದಿನಾಂಕಃ 14-12-2014 ರಂದು ನೀವು ಮತ್ತು ನಿಮ್ಮ ಇತರ ಸಿಬ್ಬಂದಿಗಳು ಆರೋಪಿಯ ವಾಹನವನ್ನು ಶೋದರೆ ಮಾಡಿರುವುದಿಲ್ಲ ಮತ್ತು ಯಾವುದೇ ನವೀಲನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನೀವು ಆನೆಯನ್ನು ಓಡಿಸಿ ಹೋಗುವಾಗ ನಿಮ್ಮ ಎದುರು ವಾಹನ ಬಂದಿರುತ್ತದೆಂದು ಹಾಗೂ ವಾಹನದಿಂದ ಒಬ್ಬ ವ್ಯಕ್ತಿ ಓಡಿ ಹೋಗಿರುತ್ತಾರೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು 1ನೇ ಆರೋಪಿಪಯ ವಿಚಾರಣೆ ಮಾಡಿರುವುದಿಲ್ಲ ಹಾಗೂ ಆತನು ನಿಮಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಸಮಕ್ಷಮ ಯಾವುದೇ ಮಹಜರ್ ಜರುಗಿಸಿರುವುದಿಲ್ಲ, ನಿಮ್ಮ ಅರಣ್ಯ ಇಲಾಖಯ ಕಚೇರಿಯಲ್ಲಿ ಮಹಜರ್ ಬರೆದು ಅದಕ್ಕೆ ನಿಮ್ಮ ಮತ್ತು ಇತರ ಸಿಬ್ಬಂದಿಗಳ ಸಹಿಯನ್ನು ಪಡೆದಿರುತ್ತಾರೆಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

8. ಆರೋಪಿಯಿಂದ ಮತ್ತು ಆತನ ವಾಹನದಿಂದ ನೀವು ಚಾಕು ಮತ್ತು ಬ್ಲೇಡ್ ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು, ಆದರೆ ಎರಡು ಬಂದೂಕುಗಳು ಜಪ್ತಿ ಪಡಿಸಿಕೊಂಡಿರುತ್ತೇವೆಂದು ನುಡಿಯುತ್ತಾರೆ. ಸದರಿ ಎರಡು ಬಂದೂಕುಗಳು 1ನೇ ಆರೋಪಿಯ ತಂದೆಯ ಹೆಸರಿನಲ್ಲಿ ಪರವಾನಗಿ ಪಡೆದಿರುವ ಬಂದೂಕುಗಳು ಎಂದು ಗೊತ್ತಾಯಿತು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಆರೋಪಿಗಳ

ಪೂರ್ವಿಕರ ಜಮೀನಿನಲ್ಲಿ ಕಾಡು ಪ್ರಾಣಿಗಳು ತೊಂದರೆ ಕೊಡುತ್ತಿದ್ದಾವೆಂದು ಹಲವು ಬಾರಿ ನಿಮಗೆ ದೂರನ್ನು ಕೊಟ್ಟಿದ್ದರು ಹಾಗೂ ನಿಮ್ಮ ಹಿರಿಯ ಮೇಲಾಧಿಕಾರಿಗಳಿಗೆ ದೂರನ್ನು ಕೊಡುತ್ತಾರೆಂದು ಆರೋಪಿಗಳ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಯಾವುದೇ ಕಾಡುಪ್ರಾಣಿ ಬೇಟೆ ಆಡಿದ ನವಿಲನ್ನು ಪಡೆದುಕೊಂಡು ಆರೋಪಿಗಳ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ . ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**

**CC NO.568/2018**

**CW-3/PW-3**

**ದಿನಾಂಕಃ 05-05-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಶ್ರೀ **ಆರ್.ಎಸ್.** ವಕೀಲರಿಂದ **ಆರೋಪಿಗಳ** ಪರವಾಗಿ :-

2ನೇ ಆರೋಪಿಯು ಕೆಬ್ಬೆಪಾಳ್ಯದ ವಾಸಿ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. 1ನೇ ಆರೋಪಿಯ ಪೂರ್ವಜರು ಕೆಬ್ಬೆಪಾಳ್ಯದ ಗ್ರಾಮಕ್ಕೆ ಸೇರಿದವರು ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. 2014 ರಲ್ಲಿ ನಿಮ್ಮ ಬಳಿ ಮೊಬೈ ಪೋನ್ ಇತ್ತು ದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಘಟನ ಸ್ಥಳದಲ್ಲಿ ನಿಮ್ಮ ಮೊಬೈಲಿನಲ್ಲಿ ಯಾವುದೇ ಪೋಟೋ ತೆಗೆದಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಬಳಿ ಕಿ ಪ್ಯಾಡ್ ಮೊಬೈಲ್ ಇತ್ತು ಎಂದು ನುಡಿಯುತ್ತಾರೆ. ಅರಣ್ಯ ಪ್ರದೇಶದಲ್ಲಿ ಸಾಕಷ್ಟು ಕತ್ತಲು ಇರುವುದರಿಂದ ಹಾಗೂ ಮುಳ್ಳು ಹಾಗೂ ಇತರೆ ಗಿಡಗಂಟೆಗಳು ಇರುವುದರಿಂದ ಆನೆಗಳ ಕಾರ್ಯ ಚಾರಣೆ ಕಷ್ಟ ಸಾದ್ಯ ಎಂದರೆ ಸಾಕ್ಷಿಯು ನಾವು ಸಾರ್ವಜನಿಕರಿಗೆ ತೊಂದರೆ ಆಗದಂತೆ ಹಳ್ಳಿಯ ಪ್ರದೇಶದಲ್ಲಿ ಕಾರ್ಯಾಚಾರಣೆ ಮಾಡುತ್ತಿದ್ದೇವು ಎಂದು ನುಡಿಯುತ್ತಾರೆ. ನವಿಲನ್ನು ಚಿರತೆಗಳು ಹಲ್ಲಿನಿಂದ ಮತ್ತು ಉಗುರಿನಿಂದ ಬೇಟೆ ಆಡುತ್ತವೆಂದರೆ ಸಾಕ್ಷಿಯು ಸಾಮಾನ್ಯವಾಗಿ ಕಾಡು ಪ್ರಾಣಿಗಳು ಬೇಟೆ ಆಡುತ್ತವೆಂದು ನುಡಿಯುತ್ತಾರೆ.

2. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಮಾರುತಿ ಓಮಿನಿ ಡಿಕ್ಕಿಯನ್ನು ಪರಿಶೀಲಿಸಲಾಗಿ ಬ್ಲೇಡ್ ನಿಂದ ಕುತ್ತಿಗೆ ಭಾಗಕ್ಕೆ ಕುಯ್ಯದಿದ್ದ ನವೀಲಿನ ಮೃತದೇಹ ದೊರಕಿರುತ್ತದೆಂದು ಹೇಳಿದ್ದು, ಸದರಿ ವಿಷಯವನ್ನು ಮಹಜರಿನಲ್ಲಿ ಬರೆದಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಓಡಿ ಹೋದ ವ್ಯಕ್ತಿಯ ಚಹರೆ ಬಗ್ಗೆ ಸಹ ಮಹಜರಿನಲ್ಲಿ ಬರೆದಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಆರೋಪಿಯ ಹೇಳಿಕೆಯನ್ನು ಸ್ಥಳದಲ್ಲಿ ಬರೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ದಿನಾಂಕಃ 14-12-2014 ರಂದು ನೀವು ಮತ್ತು ನಿಮ್ಮ ಇತರ ಸಿಬ್ಬಂದಿಗಳು ಆರೋಪಿಯ ವಾಹನವನ್ನು ಶೋದರೆ ಮಾಡಿರುವುದಿಲ್ಲ ಮತ್ತು ಯಾವುದೇ ನವೀಲನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನೀವು ಆನೆಯನ್ನು ಓಡಿಸಿ ಹೋಗುವಾಗ ನಿಮ್ಮ ಎದುರು ವಾಹನ ಬಂದಿರುತ್ತದೆಂದು ಹಾಗೂ ವಾಹನದಿಂದ ಒಬ್ಬ ವ್ಯಕ್ತಿ ಓಡಿ ಹೋಗಿರುತ್ತಾರೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು 1ನೇ ಆರೋಪಿಯ ವಿಚಾರಣೆ ಮಾಡಿರುವುದಿಲ್ಲ ಹಾಗೂ ಆತನು ನಿಮಗೆ ಯಾವುದೇ ಹೇಳಿಕೆಯನ್ನು

ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಸಮಕ್ಷಮ ಯಾವುದೇ ಮಹಜರ್ ಜರುಗಿಸಿರುವುದಿಲ್ಲ, ನಿಮ್ಮ ಅರಣ್ಯ ಇಲಾಖಯ ಕಚೇರಿಯಲ್ಲಿ ಮಹಜರ್ ಬರೆದು ಅದಕ್ಕೆ ನಿಮ್ಮ ಮತ್ತು ಇತರ ಸಿಬ್ಬಂದಿಗಳ ಸಹಿಯನ್ನು ಪಡೆದಿರುತ್ತಾರೆಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

3. ಆರೋಪಿಯಿಂದ ಮತ್ತು ಆತನ ವಾಹನದಿಂದ ನೀವು ಚಾಕು ಮತ್ತು ಬ್ಲೇಡ್ ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಆರೋಪಿಗಳ ಪೂರ್ವಿಕರ ಜಮೀನಿನಲ್ಲಿ ಕಾಡು ಪ್ರಾಣಿಗಳು ತೊಂದರೆ ಕೊಡುತ್ತಿದ್ದಾವೆಂದು ಹಲವು ಬಾರಿ ನಿಮಗೆ ದೂರನ್ನು ಕೊಟ್ಟಿದ್ದರು ಹಾಗೂ ನಿಮ್ಮ ಹಿರಿಯ ಮೇಲಾಧಿಕಾರಿಗಳಿಗೆ ದೂರನ್ನು ಕೊಡುತ್ತಾರೆಂದು ಆರೋಪಿಗಳ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಯಾವುದೋ ಕಾಡುಪ್ರಾಣಿ ಬೇಟೆ ಆಡಿದ ನವಿಲನ್ನು ಪಡೆದುಕೊಂಡು ಆರೋಪಿಗಳ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಆರೋಪಿಯ ಕಾರಿನಲ್ಲಿ ತಂತಿ ಬಲೆ ಮತ್ತು ದಾರ ಕಂಡು ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**